

ಮಕ್ಕಳ ಮಾಣಿಕ್ಯಮಾಲೆ ೩.

ಮಹಾ ತ್ಯಾಗಿ

ಬರೆಹಗಾರರು :
ಬಿ. ಶ್ರೀ. ಪಾಂಡುರಂಗರಾವ್

ಪ್ರಕಾಶಕರು :
ಬಾಲಕಿರಣ ಪ್ರಕಟನ ಮಂದಿರ
೧೧೦, ಶೇಷಾದ್ರಿಪುರಂ, ಬೆಂಗಳೂರು.

ತಾರಣ ಸಂವತ್ಸರ
೧೯೪೪

ಬೆಲೆ :
ಮೂರು ಆಣೆ

ನನ್ನ ಹಂಬಲ

ಕನ್ನಡನಾಡಿನ ಚಿನ್ನಾ,

ಭರತಖಂಡವು ಸಂಪಾದಿಸಿರುವ ಒಳ್ಳೆಯ ಹೆಸರು ಈವತ್ತು ನೆನ್ನೆಯದಲ್ಲ. ಬಹಳ ಹಿಂದಿನದು. ಅದಕ್ಕೆ ಕಾರಣ ನಮ್ಮ ಹಿರಿಯರು. ಆದರಿಂದ ಅವರ ಹೆಸರುಗಳನ್ನು ನಾವು ಮರೆಯುವುದು ಮಹಾ ಪಾಪ.

ನಮ್ಮ ದೇಶವನ್ನು ಕಟ್ಟಿದ ಹಿರಿಯರು ದೇಶದ ಒಳ್ಳೆಯದಕ್ಕಾಗಿ ತಮ್ಮ ಸುಖವನ್ನು ಮರೆತರು. ಕಷ್ಟಪಟ್ಟು ಮಹಾಸಾಹಸಿಗಳೆನಿಸಿ ಕೊಂಡರು. ದಾನಮಾಡಿ ಮಹಾಉದಾರಿಗಳೆಂದು ಹೊಗಳಿಸಿ ಕೊಂಡರು. ಜನರ ಹಿತಕ್ಕಾಗಿ ರಾಜ್ಯವನ್ನು ಬಿಟ್ಟು ಮಹಾತ್ಯಾಗಿ ಗಳೆಂದು ಕೀರ್ತಿ ಪಡೆದರು. ಜನದ ಕಷ್ಟಗಳಿಗೆ ಮರುಗಿ ಮಹಾ ಕರುಣಿಗಳೆಂದು ಪ್ರಸಿದ್ಧರಾದರು. ದೇಶವನ್ನು ಚೆನ್ನಾಗಿ ಆಳಿ ಮಹಾ ನಾಯಕರೆಂದು ಪ್ರಖ್ಯಾತರಾದರು. ಇವರೆಲ್ಲರ ಹಿರಿಮೆಗಳನ್ನು ಪದ್ಯ ಕಟ್ಟಿ ಹಾಡಿ ಮಹಾಕವಿಗಳೆಂದು ದೇಶಕ್ಕೆ ಭೂಷಣರಾದರು. ಹೀಗೆ ಅವರು ತೋರಿಸಿರುವ ದಾರಿ ನಮಗೆ ಅನುಸರಿಸಲು ತಕ್ಕ ಮಾದರಿ.


ನೀನು ನಮ್ಮ ಹಿರಿಯರಂತೆ ದೇಶವನ್ನು ಕಟ್ಟಬೇಕು. ದೇಶದ ಹೆಸರನ್ನು ಉಳಿಸಬೇಕು. ಈ ಕಾರಣದಿಂದ 'ಮಕ್ಕಳ ಮಾಣಿಕ್ಯ ಮಾಲೆ' ಎಂಬ ಹೆಸರಿನಲ್ಲಿ ಈ ವರ್ಷದ ರಾಮನವಮಿ ದಿವಸ ಶ್ರೀರಾಮಚಂದ್ರನಂಥ ಮಹಾತ್ಯಾಗಿ ಹುಟ್ಟಿದ ಗುರುತಿಗಾಗಿ ಈ ಮಾಣಿಕ್ಯಮಾಲೆಯನ್ನು ಪ್ರಾರಂಭಿಸಿದೆ.

'ಮಕ್ಕಳ ಮಾಣಿಕ್ಯಮಾಲೆ'ಯಲ್ಲಿ ಪ್ರಕಟವಾಗುವ ಮಾಣಿಕ್ಯ ಗಳು ಒಂದೊಂದೂ ಒಂದೊಂದು ಗುಣದಿಂದ ಕೂಡಿರುತ್ತವೆ. ಆ ಗುಣಗಳು ನಿನ್ನನ್ನು ದೇಶದ ಒಳ್ಳೆಯ ಪ್ರಜೆಯನ್ನಾಗಿ ಮಾಡುವುದಕ್ಕೆ 'ರಕ್ಷಾಮಣಿಯಾಗಲಿ' ಎಂದು ದೇವರಲ್ಲಿ ನನ್ನ ಪ್ರಾರ್ಥನೆ.

ನಿನ್ನ ಪ್ರೀತಿಯ ಅಣ್ಣ

ಚೈತ್ರ ಶುದ್ಧ ನವಮಿ

ಬಿ. ಶ್ರೀ. ಪಾ.



ಬಾಪೂಗೆ
ಮಕ್ಕಳೆಂದರೆ
ಅದೆಷ್ಟು ಪ್ರೇಮ!

ಈ ಮಾಣಿಕ್ಯಗಳು
ಅವರಿಗೇ
ಅರ್ಪಿತ

(ಪಡಿಯಚ್ಚು "ತಾಯಿನಾಡು" ಕೃಪೆಯಿಂದ)



ಚಿತ್ರಕಾರರು
ಶ್ರೀ॥ ಎಸ್. ಟಿ. ವೆಂಕಟಸುಬ್ಬರಾವ್

ಬೆಂಗಳೂರು ಸಿಟಿ ಇಂಡಿಯರ್ನ್‌ಪ್ರೆಸ್ಸಿನಲ್ಲಿ ಸಿ. ರಾಜಗೋಪಾಲಾಚಾರ್ಯರಿಂದ
ಮುದ್ರಿಸಲ್ಪಟ್ಟಿತು.

ಮಹಾ ತ್ಯಾಗಿ

ಕೃತಯುಗಕ್ಕೆ ಪರಶುರಾಮ

ಯುಗಕ್ಕೆ ಒಂದೇ ಅವತಾರ. ದೇಶಕ್ಕೆ ಕಷ್ಟದ ಕಗ್ಗತ್ತಲು ಕವಿದಾಗ ಬೆಳಕು ಕಾಣಿಸಲು ಒಬ್ಬ ಮಹಾಪುರುಷನು ಬೇಕಾಗುವುದು. ಅಂಥ ಸಮಯದಲ್ಲಿ ಹುಟ್ಟಿದ ಮಹಾನುಭಾವನ ಇಡೀ ಜೀವಿತವು ದೇಶದ ಒಳ್ಳೆಯದಕ್ಕೆ ಮೀಸಲಾಗುವುದು. ಆತನು ತನ್ನ ಜನಕ್ಕಾಗಿ, ದೇಶಕ್ಕಾಗಿ ಮರುಗುವನು. ತನ್ನ ಸುಖಸಂತೋಷಗಳನ್ನು ಇತರರಿಗಾಗಿ ಬಿಟ್ಟುಕೊಟ್ಟು ಅವರ ಕಷ್ಟಸುಖಗಳಿಗಾಗಿ ತನ್ನನ್ನು ತಾನು ಮರೆಯುವನು. ತನ್ನವರಿಗಾಗಿ, ತಾಯಿನಾಡಿಗಾಗಿ ತನ್ನ ದೇಹವನ್ನು ಸವೆಸಿ **ಮಹಾತ್ಯಾಗಿ** ಎನ್ನಿಸಿಕೊಳ್ಳುವನು. ಅಂಥ ತ್ಯಾಗಿ ಹೇಳಿದಂತೆ ಜನ ಕೇಳುವುದು, ಆತನು ಮಾಡೆಂದಂತೆ ಜನ ಮಾಡುವುದು. ಆತನು ನಡೆದಂತೆ ಜನ ನಡೆಯುವುದು. ಆತನು ಬದುಕಿರುವಷ್ಟು ದಿವಸಗಳೂ ಜನ ಆತನನ್ನು ಗೌರವಿಸುವುದು. ಆತನು ಸತ್ತಮೇಲೆ ಸಹ ಆತನನ್ನು ದೇವರ ಪದವಿಗೇರಿಸಿ ಅವತಾರವೆಂದು ಪೂಜಿಸುವುದು. ಅಂಥ ಮಹಾಗುಣಿಯೊಬ್ಬನ ಅವತಾರ ತ್ರೇತಾಯುಗದಲ್ಲಾಯಿತು.

ತ್ರೇತಾಯುಗದ ಅವತಾರಕ್ಕೆ ಪೀಠಿಕೆ ಕೃತಯುಗದಲ್ಲಾದ ಪರಶುರಾಮಾವತಾರ. ಕೃತಯುಗಲ್ಲಿ ಭೂಮಿಯನ್ನಾಳುವ

ದೊರೆಗಳು ಮನಸ್ಸಿಗೆ ಬಂದಂತೆ ನಡೆದುಕೊಳ್ಳುತ್ತಿದ್ದರು. 'ಜನಕ್ಕಾಗಿ ದೊರೆ' ಎನ್ನುವುದನ್ನು ಮರೆತು 'ದೊರೆಗಾಗಿ ಜನ' ಎಂದುಕೊಂಡು ತಮ್ಮ ಮನಬಂದಂತೆ ಮಾಡುತ್ತಾ ಪ್ರಜೆಗಳಿಗೆ ಪೀಡೆಯಾಗಿದ್ದರು. ಕೃತಯುಗದಲ್ಲಾಳಿದ ಕಾರ್ತವೀರ್ಯಾರ್ಜುನನೆಂಬ ಅರಸು ಅಂಥವನು. ಅವನ ಸಲುವಾಗಿ ತಪಸ್ಸಿಗೆಂದು ಹುಟ್ಟಿದ ಪರಶುರಾಮನು ಗಂಡುಗೊಡಲಿ ಹಿಡಿದು ಕ್ಷತ್ರಿಯರನ್ನೆಲ್ಲ ದಂಡಿಸಿದನು.

ಕಾರ್ತವೀರ್ಯಾರ್ಜುನನು ಮಹಾಋಷಿಗಳನ್ನು ಕೂಡ ಹಿಂಸಿಸುತ್ತಿದ್ದನು. ಒಂದು ಸಲ ತನ್ನ ರಾಜಧಾನಿಗೆ ಸಮೀಪದಲ್ಲಿರುವ ಜಮದಗ್ನಿಯೆಂಬ ಮಹಾಋಷಿಯ ಆಶ್ರಮಕ್ಕೆ ಹೋಗಿ ಅಲ್ಲಿದ್ದ ಆಶ್ರಮದ ಹಸುವನ್ನು ತನ್ನಲ್ಲಿಗೆ ಎಳೆದೊಯ್ಯಲು ಪ್ರಯತ್ನಿಸಿದನು. ಇನ್ನೊಂದು ಸಲ ಅದೇ ಆಶ್ರಮಕ್ಕೆ ನಡೆದು ಆಶ್ರಮದ ಸರೋವರದಲ್ಲಿ ನೀರಾಟವಾಡಿದನು. ಅಲ್ಲದೆ ಜಮದಗ್ನಿಯ ಹೆಂಡತಿಯಾದ ರೇಣುಕೆಯ ಮೇಲೆ ಕಣ್ಣಿಟ್ಟನು. ಅದರಿಂದ ಜಮದಗ್ನಿಯು ತನ್ನ ಮಗನಾದ ಪರಶುರಾಮನಿಂದ ಆಕೆಯನ್ನು ಕೊಲ್ಲಿಸಬೇಕಾಯಿತು. ಆದರೆ ಪರಶುರಾಮನು ತಂದೆಯನ್ನು ಮೆಚ್ಚಿಸಿ ತಾಯನ್ನು ಬದುಕಿಸಿಕೊಂಡನು. ಕಾರ್ತವೀರ್ಯಾರ್ಜುನನ ನೀಚತನ ಇಲ್ಲಿಗೆ ನಿಲ್ಲಲಿಲ್ಲ. ಅವನು ಜಮದಗ್ನಿಯು ತನಗೆ ಪ್ರತಿಕಕ್ಷಿಯೆಂದು ತಿಳಿದನೋ ಏನೋ, ಮತ್ತೆ ಆಶ್ರಮಕ್ಕೆ ಕಾಲಿಟ್ಟನು. ತಪಸ್ಸಿಗೆಂದು ಕಣ್ಣು ಮುಚ್ಚಿ ಕುಳಿತಿದ್ದ ಜಮದಗ್ನಿಯ ತಲೆಯನ್ನು ತನ್ನ ಕತ್ತಿಯಿಂದ ಹಾರಿಸಿದನು. ಪರಶುರಾಮನಿಗೆ ಇನ್ನು ಸೈರಿಸಲಾಗಲಿಲ್ಲ. ಆಗ ಆತನು ಆವೇಶಗೊಂಡು,

'ರಾಜನದು ರಾಜ್ಯವಲ್ಲ. ರಾಜ್ಯ ದೇವನದು.
ಆ ದೇವನೆದುರಿನಲಿ ಭೂಪಗೀಪರು ಒಂದೆ
ನಮ್ಮಂತೆ ಇವನೊಬ್ಬ—ಕಾರ್ತವೀರ್ಯಾರ್ಜುನನು'
ಎಂದು ಕಾಡೆಲ್ಲ ನಡುಗುವಂತೆ ಗರ್ಜಿಸಿದನು.

'ಕಾದಬಲ್ಲವರಾವು. ನೋದಬಲ್ಲವರಾವು
ಧರ್ಮ ನಮ್ಮಲ್ಲಿರಲು ದೈವಬಲ ವುಂಟೆಮಗೆ
ದೈವಬಲವೊದಗಿರಲು ಗೆಲವು ಸಿದ್ಧವು ನಮಗೆ'
ಎಂದು ಎದುರಿಗೆ ಕಂಡ ಗಂಡುಗೊಡಲಿಯನ್ನು ಕೈಗೆ ತೆಗೆದುಕೊಂಡನು.

'ನಮ್ಮ ಮನೆಯುಲಿ ನಮಗೆ ಸ್ವಾತಂತ್ರವಿಲ್ಲವೋ?
ಈ ದಾಸ್ಯದಿಂದೆಮಗೆ ಉದ್ಧಾರವಿಲ್ಲವೇನು?
ಮನೆಮಠವನಾಪ್ತರನು ಇದರಿಂದ ಉಳಿಸಲಿಕೆ
ಸೈರಣೆಯು ಹಳಸಿಹುದು—ಕೊಡಲಿಯೆ ಉಳಿದಿಹುದು'
ಎಂದು ಗಂಡುಗೊಡಲಿಯನ್ನು ಹೆಗಲಿಗೇರಿಸಿ ಕಾರ್ತವೀರ್ಯಾರ್ಜುನನ ಅರಮನೆಗೆ ನಡೆದನು.

'ಕಲ್ಲು ಕಣ್ಣೀರಿಡುವ ನಾಡ ಸಂಕಟ ಕಂಡು
ನನ್ನೆದೆಯಿಲೆದ್ದಿರುವ ಬೇಗೆಯನು ಬಲ್ಲಿರಾ?'
ಎಂದು ರೋಷದಿಂದ ಕಾರ್ತವೀರ್ಯಾರ್ಜುನನ ಮುಂದೆ ಗಂಡುಗೊಡಲಿಯನ್ನು ಹಿಡಿದು ಝಳುಪಿಸಿದನು.

'ಪ್ರಜಾಪೀಡಕ! ನಿನ್ನ ಘೋರ ಮುಷ್ಟಿಯ ಬಿಡಿಸಿ
ಜನಪದವ, ನಮ್ಮಾಶ್ರಮವನುಳುಹ ಬೇಕಾಸು'
ಎಂದು ಗುಡುಗಾಡಿಸಿ ಕಾರ್ತವೀರ್ಯಾರ್ಜುನನ್ನು ದರದರ ಹಿಡಿ

ದೆಳೆದು ತನ್ನ ಗಂಡುಗೊಡಲಿಯಿಂದ ಅವನ ತಲೆಯನ್ನು ಚೆಂಡಾಡಿದನು. ಪರಶುರಾಮನ ಕೋಪದುರಿ ಅಲ್ಲಿಗೇ ಆರಲಿಲ್ಲ. ಕಾರ್ತವೀರ್ಯಾರ್ಜುನ ರಕ್ತದಲ್ಲಿ ಅದ್ದಿದ ಗಂಡುಗೊಡಲಿಯನ್ನು ರಾಜ್ಯವಾಳುವ ದೊರೆಗಳ ಮೇಲೆಲ್ಲ ಇಪ್ಪತೊಂದು ಸಲ ಝಳುಪಿಸಿ ಅವರ ತಲೆಗಳನ್ನು ತರಿದು, ಅವರು ಮತ್ತೆ ಅಹಂಕಾರದಿಂದ ಮೆರೆಯದಂತೆ ಮಾಡಿದನು. ಭೂಮಿಯಾಳುವ ಅರಸರಿಗೆ ಪರಶುರಾಮನು ಕಲಿಸಿದ ಪಾಠ ಮುಂದೆ ಫಲ ಕೊಟ್ಟಿತು. ಅವರೆಲ್ಲ ಎಚ್ಚೆತ್ತರು. ಅಂದಿನಿಂದ ದೊರೆಗಳು ಪರಶುರಾಮನೆಂದಂತೆ.

‘ ರಾಜನದು ರಾಜ್ಯವಲ್ಲ, ರಾಜ್ಯ ದೇವನದು
ಆ ದೇವನೆದುರಿನಲಿ, ಭೂಪಗೀಪರು ಒಂದೆ *

ಎಂಬುದನ್ನು ನಿತ್ಯಮಂತ್ರವಾಗಿ ಮಾಡಿಕೊಂಡರು. ಆ ನಿತ್ಯ ಮಂತ್ರದ ಮುಖ್ಯ ತತ್ವ ‘ ದೊರೆಗೆ ಪ್ರಜೆ ದೇವರು ’

ತ್ರೇತಾಯುಗಕ್ಕೆ ಶ್ರೀರಾಮ

ಕೃತಯುಗ ಕಳೆದು ತ್ರೇತಾಯುಗ ನಡೆಯುತ್ತಿತ್ತು. ಆಗ ಸೂರ್ಯವಂಶದಲ್ಲಿ ಹೆಸರಾದ ದಶರಥ ಚಕ್ರವರ್ತಿಯು ಕೋಸಲ ರಾಜ್ಯಕ್ಕೆ ಅಯೋಧ್ಯಾ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನಮ್ಮ ದೇಶವನ್ನು ಬಹಳ ಸುಖವಾಗಿ ಆಳುತ್ತಿದ್ದನು. ಕೌಸಲ್ಯೆ, ಸುಮಿತ್ರೆ, ಕೈಕೇಯಿ ಎಂಬ ಮೂವರು ರಾಣಿಯರು

* ಈ ಭಾಗದಲ್ಲಿ ಬಂದಿರುವ ಪದ್ಯಗಳಂತಿರುವ ಸಾಲುಗಳನ್ನು ನಮ್ಮ ನಾಡಿನ ಪ್ರಸಿದ್ಧ ಕವಿಗಳಾದ ಶ್ರೀ ಜಿ. ಪಿ. ರಾಜರತ್ನಂ ಅವರ ‘ ಗಂಡುಗೊಡಲಿ ’ ಎಂಬ ನಾಟಕದಿಂದ ಎತ್ತಿಕೊಂಡು ಕಥೆಗೆ ಸರಿಯಾಗಿ ಜೋಡಿಸಿಕೊಂಡಿದೆ.

ಆತನನ್ನು ಸುಖವಾಗಿರಿಸಲು ಸಿದ್ಧರಾಗಿದ್ದರು. ರಾಜ್ಯದ ಪ್ರಜೆಗಳು ದೊರೆಯ ಸುಖವೇ ತಮ್ಮ ಸುಖವೆಂದು ಆತನನ್ನು ಸಂತೋಷಪಡಿಸಲು ನಾನುತಾನೆಂದು ಹಾತೊರೆಯುತ್ತಿದ್ದರು. ಋಷಿಗಳೆಲ್ಲ ಆತನಿಗೆ ಒಳ್ಳೆಯದನ್ನು ಬಯಸುತ್ತಿದ್ದರು. ದೇವತೆಗಳೆಲ್ಲ ಆತನಿಗೆ ಮಂಗಳವನ್ನು ಕೋರುತ್ತಿದ್ದರು. ಆದರೂ ದಶರಥನಿಗೆ 'ಮಕ್ಕಳಿಲ್ಲವಲ್ಲ' ಎನ್ನುವ ಕೊರತೆ ದೊಡ್ಡದಾಗಿ ಆತನ ದುಃಖ ಬಹಳವಾಗಿತ್ತು.

ಇದೇ ಸಮಯದಲ್ಲಿ ಋಷಿಗಳ ಕಷ್ಟ ಮಿತಿಮೀರಿತ್ತು. ಕಾಡಿನಲ್ಲಿ ಆಶ್ರಮ ಮಾಡಿಕೊಂಡು ಯಾಗ ಮೊದಲಾದುವುಗಳನ್ನು ನಡೆಸುತ್ತ ಜನಸೇವೆಯಲ್ಲಿ ತೊಡಗಿದ್ದ ಅವರಿಗೆ ರಾವಣನಿಂದ, ಅವನ ಕಡೆಯವರಿಂದ ನಾನಾ ಕಷ್ಟಗಳಿದ್ದುವು. ಬ್ರಹ್ಮದೇವನಿಂದ ವರ ಪಡೆದು ಬಲಶಾಲಿಯಾಗಿದ್ದ ಅವನ ಕಾಟ ದೇಶದಲ್ಲೆಲ್ಲ ಬಹಳವಾಗಿತ್ತು. ಅವನ ಕಡೆಯವರು ವೇಷ ಮರಸಿಕೊಂಡು ಆಶ್ರಮಗಳಿಗೆ ನುಗ್ಗಿ ಋಷಿಗಳ ಮಕ್ಕಳು ಮರಿಗಳನ್ನು, ದನಕರುಗಳನ್ನು ಕದ್ದು ಗೋಳಾಡಿಸುತ್ತಿದ್ದರು. ಯಾಗಗಳು ನಡೆಯುತ್ತಿರುವಾಗ ಗುಂಪುಗುಂಪಾಗಿ ಕಾಣಿಸಿಕೊಂಡು ತಾವು ತಿಂದುಮಿಕ್ಕ ಎಂಜಲು ಮಾಂಸವನ್ನು ಯಾಗ ಮಾಡುತ್ತಿದ್ದ ಋಷಿಗಳ ಮೇಲೆ ಎಸೆದು ಯಾಗ ಕೆಡಿಸುತ್ತಿದ್ದರು. ಅದರಿಂದ ಋಷಿಗಳೆಲ್ಲ 'ಮಹಾಪುರುಷನೊಬ್ಬನು ಭೂಮಿಯಲ್ಲಿ ಅವತರಿಸಿ ನಮ್ಮನ್ನು ಕಾಪಾಡಬಾರದೆ' ಎಂದು ಗೋಳಾಡುತ್ತಿದ್ದರು.

ಈ ಸಮಯದಲ್ಲಿ ದೇವತೆಗಳಿಗೂ ಸುಖವಿರಲಿಲ್ಲ. ಬ್ರಹ್ಮನ ವರಬಲದಿಂದ ಕೊಬ್ಬಿದ ರಾವಣನು ತನಗಿಷ್ಟಷ್ಟು

ಸುಖವಲ್ಲಿ ಸಂತೋಷಪಡದೆ ದೇವತೆಗಳ ರಾಜ್ಯ ಐಶ್ವರ್ಯಗಳನ್ನು ದಕ್ಕಿಸಿಕೊಳ್ಳುವುದಕ್ಕೆ ಕೈಚಾಚಿದ್ದನು. ದೇವತೆಗಳ ರಾಜಧಾನಿ ಅಮರಾವತಿ ಪಟ್ಟಣಕ್ಕೆ ಮುತ್ತಿಗೆ ಹಾಕಿ ಅವರ ದೊರೆಯಾದ ಇಂದ್ರನನ್ನು ಎಷ್ಟೋ ಸಲ ಅಲ್ಲಿಂದ ಓಡಿಸಿದ್ದನು. ದೇವತೆಗಳಲ್ಲೆಲ್ಲ ಹಣವಂತನಾದ ಕುಬೇರನನ್ನು ಪೀಡಿಸಿ ಅವನ ಐಶ್ವರ್ಯವನ್ನು ದೋಚಿದ್ದನು. ನ್ಯಾಯದೇವತೆಯಾದ ಯಮಧರ್ಮನನ್ನು ಸೆರೆ ಹಿಡಿದು ತನ್ನ ಸೇವಕನನ್ನಾಗಿ ಮಾಡಿಕೊಂಡಿದ್ದನು. ದೇವತೆಗಳ ಕಷ್ಟ ದಶರಥನ ಮತ್ತು ಋಷಿಗಳ ಕಷ್ಟ ಮೀರಿತ್ತು. ಅವರೂ ಯಾರಾದರೊಬ್ಬ ಮಹಾ ಬಲವಂತ ಭೂಮಿಯಲ್ಲಿ ಅವತರಿಸಿ ನಮ್ಮನ್ನು ಕೈಹಿಡಿಯಬಾರದೆ' ಎಂದು ದೇವರಲ್ಲಿ ಮೊರೆಯಿಡುತ್ತಿದ್ದರು.

ಇಂಥ ಸಮಯದಲ್ಲಿ, ಶ್ರೀರಾಮಚಂದ್ರನು ದಶರಥ ಚಕ್ರವರ್ತಿಗೆ ಮಗನಾಗಿ ಹುಟ್ಟಿ ದೇಶದಲ್ಲಿ ಸಂತೋಷ ಮೂಡಿತು. ಗುರು ವಸಿಷ್ಠರು 'ಪುತ್ರಕಾಮೇಷ್ಠಿ' ಎಂಬ ಯಾಗವನ್ನು ಮಾಡುವಂತೆ ದಶರಥನಿಗೆ ಹೇಳಿದರು. ಮಕ್ಕಳಿಲ್ಲದವರು ಮಕ್ಕಳನ್ನು ಅಪೇಕ್ಷಿಸಿ ಮಾಡುವ ಯಾಗಕ್ಕೆ ಪುತ್ರಕಾಮೇಷ್ಠಿ ಎಂದು ಹೆಸರು. ಗುರುವಿನ ಅಪ್ಪಣೆಯಂತೆ ಆತನು ಆ ಯಾಗವನ್ನು ಬಹಳ ವೈಭವದಿಂದ ಮಾಡಿದನು. ಆ ಸಮಯದಲ್ಲಿ ಪ್ರಜೆಗಳು, ಋಷಿಗಳು, ದೇವತೆಗಳು, 'ವಂಶಕ್ಕೆ, ಜನಕ್ಕೆ, ದೇಶಕ್ಕೆ ಒಳ್ಳೆಯ ಹೆಸರು ತರುವ ಮಕ್ಕಳು ಚಕ್ರವರ್ತಿಗೆ ಆಗಲಿ' ಎಂದು ದೇವರನ್ನು ಪ್ರಾರ್ಥಿಸಿದರು. ಎಲ್ಲರ ಇಷ್ಟಕ್ಕೆ ಸರಿಯಾಗಿ ಯಾಗವಾದ ಒಂದು ವರ್ಷದೊಳಗಾಗಿ ದಶರಥನ ರಾಣಿಯರಾದ ಕೌಸಲ್ಯೆಯಲ್ಲಿ ಶ್ರೀರಾಮಚಂದ್ರ, ಕೈಕೆಯಿಯಲ್ಲಿ ಭರತ, ಸುಮಿತ್ರೆಯಲ್ಲಿ ಲಕ್ಷ್ಮಣ ಶತ್ರುಘ್ನರು ಹುಟ್ಟಿದರು.

ಶ್ರೀರಾಮನ ವಿದ್ಯಾಗುರುಗಳು

ಮಕ್ಕಳು ಮುಂದೆ ದೊಡ್ಡವರಾಗಿ ಮಹಾಗುಣಶಾಲಿಗಳಾಗಿ ಬಾಳಬೇಕೆಂದು ದಶರಥನು ಆಸೆಪಟ್ಟನು. ರಾಜ್ಯವಾಳುವುದು ಆಟವಾಡುವಷ್ಟು ಸುಲಭವಲ್ಲ. ಹರಟೆ ಹರಟುವಷ್ಟು ಹಗುರವಲ್ಲ. ಇದನ್ನು ಬಲ್ಲ ಆತನು ಗುರು ವಸಿಷ್ಠರೇ ತನ್ನ ಮಕ್ಕಳಿಗೆ ಸರಿಯಾದ ವಿದ್ಯಾ ಗುರುಗಳೆಂದು ಯೋಚಿಸಿದನು.

ದಶರಥನ ಇಷ್ಟದಂತೆ ಗುರು ವಸಿಷ್ಠರು ಮಕ್ಕಳಿಗೆ ಮೊದಲು ವಿದ್ಯಾಗುರುಗಳಾದರು. ವಸಿಷ್ಠರೆಂದರೆ ಋಷಿಗಳಲ್ಲೆಲ್ಲ ಬಹಳ ದೊಡ್ಡವರು. ಹುಟ್ಟುತ್ತಲೆ ಬ್ರಹ್ಮಋಷಿಗಳೆನ್ನಿಸಿಕೊಂಡವರು. ಉಳಿದೆಲ್ಲ ಋಷಿಗಳೂ ಅವರಿಂದ 'ಬ್ರಹ್ಮಋಷಿ' ಎನ್ನಿಸಿಕೊಳ್ಳುವುದು ಮಹಾಭಾಗ್ಯವೆಂದು ತಿಳಿದಿದ್ದರು. ಕಾರಣ ಋಷಿಗಳಲ್ಲೆಲ್ಲ ಬ್ರಹ್ಮಋಷಿ ಪದವಿ ಬಹಳ ದೊಡ್ಡ ಪದವಿ. ವಸಿಷ್ಠರಾದರೋ ತಮಗೆ ಬೇಕಾದವರೆಂದು ಯಾರನ್ನೂ ಬ್ರಹ್ಮಋಷಿಯೆನ್ನರು. ಆದರೆ ಆ ಪದವಿಗೆ ಸರಿಯಾದವರು ತಮಗೆ ಆಗದವರಾದರೂ ಅವರನ್ನು ಬ್ರಹ್ಮಋಷಿಯೆನ್ನಲು ಹಿಂಜರಿಯರು. ಇದು ವಿಶ್ವಾಮಿತ್ರರ ವಿಷಯದಲ್ಲಿ ಸರಿಹೋಯಿತು. ವಿಶ್ವಾಮಿತ್ರರು ಹುಟ್ಟಿನಿಂದ ಕ್ಷತ್ರಿಯರು. ಒಂದಾನೊಂದು ಕಾಲದಲ್ಲಿ ರಾಜ್ಯವನ್ನೂ ಆಳುತ್ತಿದ್ದರು. ಅವರು ಒಂದು ಸಲ ವಸಿಷ್ಠರ ಆಶ್ರಮಕ್ಕೆ ಬಂದರು. ವಸಿಷ್ಠರು ತಮ್ಮ ದೊರೆಯೆಂದು ವಿಶ್ವಾಮಿತ್ರರನ್ನು ಬಹಳ ಮರ್ಯಾದೆಯಿಂದ ಕಂಡು ಅವರನ್ನು ರಾಜನಿಗೆ ತಕ್ಕ ರೀತಿಯಲ್ಲಿ ಊಟ ಉಪಚಾರಗಳಿಂದ ಸಂತೋಷಪಡಿಸಿದರು. ಕಾಡಿನಲ್ಲಿ ಆಶ್ರಮ ಕಟ್ಟಿಕೊಂಡು ಬಡತನವನ್ನಪ್ಪಿಕೊಂಡಿರುವ ವಸಿಷ್ಠರು ಮಾಡಿದ

ಉಪಚಾರಕ್ಕೆ ವಿಶ್ವಾಮಿತ್ರರು ಬೆರಗಾಗಿಹೋದರು. ಆಶ್ರಮದಲ್ಲಿರುವ ಸಬಲೆಯೆಂಬ ಹಸುವಿನ ಮಹಿಮೆಯಿಂದ ವಸಿಷ್ಠರು ಎಂಥ ಚಕ್ರವರ್ತಿಯನ್ನಾದರೂ ಊಟ ಉಪಚಾರಗಳಿಂದ ತೃಪ್ತಿಪಡಿಸುವರೆಂದು ತಿಳಿದಮೇಲಂತೂ ಅವರು ಆಶ್ಚರ್ಯದಿಂದ 'ಎಲ ಎಲ ಇದೆಂಥ ಶಕ್ತಿ!' ಎಂದುಕೊಂಡರು. ಆ ಹಸುವನ್ನು ತಮಗೆ ಕೊಡುವಂತೆ ಅವರು ವಸಿಷ್ಟರನ್ನು ಬಲವಂತಪಡಿಸಿದರು. ವಸಿಷ್ಟರು 'ದೊರೆಯೆ, ನನ್ನ ಪ್ರಾಣವಾದ ಈ ಭಾಗ್ಯದೇವಿ ಸಬಲೆಯನ್ನು ಬಿಟ್ಟು ಬೇರೆ ಕೇಳಿ, ಕೊಡುವೆನು' ಎಂದರು. ವಸಿಷ್ಟರ ಈ ಮಾತುಗಳನ್ನು ತಳ್ಳಿಹಾಕಿ, ಅರಸನೆಂಬ ಸೊಕ್ಕಿನಿಂದ ವಿಶ್ವಾಮಿತ್ರರು ಸಬಲೆಯ ಕೊಂಬುಗಳಿಗೆ ಕೈಹಾಕಿ ಎಳೆದರು. ಆಶ್ರಮದಲ್ಲಿ ಈ ಬಗೆಯನ್ನು ಎಂದೂ ಕಂಡರಿಯದ ಸಬಲೆಯು ಕಣ್ಣುಗಳಲ್ಲಿ ಕೆಂಡಗಳನ್ನು ಕಾರುವಂತೆ ಕೋಪದಿಂದ ಒಂದು ಸಲ ಹೂಂಕರಿಸಿ ಮೈ ಒದರಿತು. ಕ್ಷಣಮಾತ್ರದಲ್ಲಿ ಎಣಿಕೆಗೆ ಸಿಗದಷ್ಟು ಸೈನ್ಯಹುಟ್ಟಿ, ವಿಶ್ವಾಮಿತ್ರರನ್ನು, ಅವರ ಪರಿವಾರವನ್ನು ಸುತ್ತುಗಟ್ಟಿ, 'ಸಾಕು ಸಾಕು' ಎನ್ನುವವರೆಗೆ 'ಸಾಯಬೀಳ' ಹೊಡೆದು ಅಸ್ತ್ರವೃಷ್ಟಿಮಾಡಿ ಚೆನ್ನಾಗಿ ಬುದ್ಧಿ ಕಲಿಸಿತು. ವಿಶ್ವಾಮಿತ್ರರಿಗೆ ತಾವು ದೊರೆಯೆಂಬ ಅಹಂಕಾರ ಇಳಿಯಿತು. ವಸಿಷ್ಠರಂಥ ತಪಸ್ವಿಗಳ ಮಹಿಮೆ ತಿಳಿಯಿತು 'ಕ್ಷತ್ರಿಯ ಬಲಕ್ಕೆ ಧಿಕ್ಕಾರ, ಬ್ರಹ್ಮಬಲಕ್ಕೆ ಜಯಕಾರ!' ಎಂದು ಆ ಕೂಡಲೆ ಕಾಡಿಗೆ ನಡೆದರು. ಕಷ್ಟಪಟ್ಟು ತಪಸ್ಸುಮಾಡಿ ರಾಜನಾಗಿದ್ದವರು ಋಷಿಗಳಾದರು. ಋಷಿಗಳೆನ್ನಿಸಿಕೊಂಡವರು ಮಹರ್ಷಿಗಳಾದರು. ಕಡೆಗೆ ವಸಿಷ್ಠರಿಂದ ಬ್ರಹ್ಮಋಷಿಗಳೆನ್ನಿಸಿಕೊಂಡು ರಾಜರುಗಳಿಂದ, ಋಷಿಗಳಿಂದ ಇಬ್ಬರಿಂದಲೂ ಮಹಾತ್ಮರೆನಿಸಿಕೊಂಡರು.

ಹೀಗೆ ಕಾಜರಾಗಿದ್ದವರನ್ನು ಮಹಾತ್ಮರನ್ನಾಗಿ ಮಾಡಿದ ವಸಿಷ್ಠರು ಸಾಮಾನ್ಯರೇ! ಅವರು ದೊರೆಗೆ ರಾಜ್ಯಾಡಳಿತದಲ್ಲಿ ತಿಳುವಳಿಕೆ ಕೊಡಲು ಶಕ್ತರು. ನಡವಳಿಕೆಯಲ್ಲಿ ಜಾಣರು. ಅಂಥ ಮಹಾ ಗುಣಿಗಳು ಮಕ್ಕಳಿಗೆ ವಿದ್ಯಾದಾನಮಾಡಲು ಒಪ್ಪಿದುದು ದಶರಥನಿಗೆ ಮಹಾ ಭಾಗ್ಯ ದೊರೆತಂತಾಯಿತು. ವಸಿಷ್ಠರಿಂದ ನಾಲ್ಕು ಮಕ್ಕಳೂ ವೇದ, ಶಾಸ್ತ್ರಗಳನ್ನು ಕಲಿತರು. ರಾಜ್ಯವಾಳುವ ಕ್ರಮವನ್ನು ಹೇಳಿಸಿಕೊಂಡರು. ನ್ಯಾಯಮಾಡುವ ವಿಧಾನವನ್ನು ತಿಳಿದುಕೊಂಡರು. ಬಿಲ್ಲು ಹಿಡಿದು ಬಾಣಬಿಡುವುದರಲ್ಲಿ, ಕುದುರೆ ಸವಾರಿಯಲ್ಲಿ, ತೇರು ಸೈನ್ಯ ನಡೆಸುವುದರಲ್ಲಿ ನಿಪುಣರೆನಿಸಿಕೊಂಡರು.

ಗುರು ವಸಿಷ್ಠರು ಹೇಳಿಕೊಡುವುದೆಲ್ಲ ಪೂರೈಸಿತು ಎನ್ನುವಷ್ಟರೊಳಗೆ ಶ್ರೀರಾಮ ಲಕ್ಷ್ಮಣರಿಗೆ ವಿಶ್ವಾಮಿತ್ರರು ಎರಡನೆಯ ವಿದ್ಯಾ ಗುರುಗಳಾದರು. ವಿಶ್ವಾಮಿತ್ರರೆಂದರೆ ಪ್ರಪಂಚಕ್ಕೇ ಸ್ನೇಹಿತರೆಂದರ್ಥ.

ಶ್ರೀರಾಮನ ಪರಾಕ್ರಮ

ವಿಶ್ವಾಮಿತ್ರರಿಗೆ ಪರಾಕ್ರಮಿಗಳ ಸಹಾಯ ಬೇಕಾಗಿತ್ತು. ಅವರು ಒಂದು ಯಾಗ ಮಾಡಲು ಯೋಚಿಸಿ ಸರಿಯಾದ ಸಹಾಯವಿಲ್ಲದೆ ಸುಮ್ಮನಾಗಿದ್ದರು. ಅವರ ಆಶ್ರಮದ ಸುತ್ತಮುತ್ತಲು ಮಾರೀಚ ಸುಬಾಹುಗಳೆಂಬ ನೀಚರಿಬ್ಬರ ಹಾವಳಿ ಅಸಾಧ್ಯವಾಗಿತ್ತು. ತಪಸ್ಸುಮಾಡಿ ಸಂಪಾದಿಸಿದ್ದ ಪುಣ್ಯದಿಂದ ವಿಶ್ವಾಮಿತ್ರರು ಒಂದು ನಿಮಿಷದಲ್ಲಿ ಅವರನ್ನು ನಾಶಮಾಡಬಹುದಾಗಿತ್ತು. ಆದರೆ ಒಳ್ಳೆಯದಕ್ಕಾಗಿ ಸಂಪಾದಿಸಿದ ಪುಣ್ಯವನ್ನು ಒಬ್ಬರನ್ನು ನಾಶಪಡಿಸುವುದಕ್ಕಾಗಿ ಉಪಯೋಗಿ

ಸುವುದೆ? ಅಲ್ಲದೆ ಇಂಥ ಕೆಟ್ಟವರನ್ನು ಶಿಕ್ಷೆಮಾಡುವುದು ರಾಜ್ಯ ವಾಳುವವರಿಗೆ ಸೇರಿದ ಕೆಲಸ. ಹೀಗೆ ಅವರು ಯೋಚಿಸಿ ದಶರಥನಲ್ಲಿಗೆ ಬಂದರು. ಅಲ್ಲಿ ಅವರು ಶ್ರೀರಾಮ ಲಕ್ಷ್ಮಣ ರನ್ನು ನೋಡಿ ಅವರಿಬ್ಬರೇ ತಮ್ಮ ಕೆಲಸಕ್ಕೆ ಸರಿಯಾದವ ರೆಂದು ನಿಶ್ಚಯಿಸಿ ಅವರನ್ನು ತಮಗೆ ಸಹಾಯವಾಗಿ ಕಳುಹಿಸು ವಂತೆ ದಶರಥನನ್ನು ಕೇಳಿದರು. 'ಹಾಲುಗಲ್ಲದ ಹಸುಳೆ ಗಳಿಂದ ವಿಶ್ವಾಮಿತ್ರರ ಕೆಲಸ ಸಾಧ್ಯವಾಧೀತೇ!' ಎಂದು ದಶ ರಥನು ಅ ನು ಮಾ ನ ಪ ಟ್ಟ ನು. ವಸಿಷ್ಠರು 'ದೊರೆಯೆ, ವಿಶ್ವಾಮಿತ್ರರಂಥ ಮಹಾತ್ಮರ ಸೇವೆ ಸಾಮಾನ್ಯರಿಗೆ ಸಿಗು ವುದೇ?' ನಿನ್ನ ಮಕ್ಕಳ ಪುಣ್ಯದಿಂದ ಬ್ರಹ್ಮಋಷಿಗಳ ಸೇವೆ ಅವರಿಗೆ ಲಭಿಸಿತು. ಚಿಕ್ಕವರಾಗಿರುವಾಗಲೇ ಯಾಗರಕ್ಷಣೆ ಮಾಡಿದವರೆಂಬ ಕೀರ್ತಿಗೆ ಅವಕಾಶ ಸಿಕ್ಕಿತು. ಚಿಂತೆಯನ್ನು ಬಿಟ್ಟು ಸಂತೋಷದಿಂದ ಮಕ್ಕಳನ್ನು ವಿಶ್ವಾಮಿತ್ರರ ಸಂಗಡ ಕಳುಹಿಸಿಕೊಡು' ಎಂದು ಹಿತ ಹೇಳಿದರು. ಗುರುಗಳ ಅಪ್ಪಣೆ ಯಂತೆ ದಶರಥನು ಸಂತೋಷದಿಂದ ವಿಶ್ವಾಮಿತ್ರರ ಜೊತೆಯಲ್ಲಿ ಶ್ರೀರಾಮ ಲಕ್ಷ್ಮಣರನ್ನು ಕಳುಹಿಸಿಕೊಟ್ಟನು.

ಅವರು ಅರಮನೆಯಲ್ಲಿದ್ದ ರಾಮ ಲಕ್ಷ್ಮಣರನ್ನು ಕಾಡಿಗೆ ಕರೆದುಕೊಂಡು ಹೋದರು. ಸಂಚಾರ ಮಧ್ಯದಲ್ಲಿ ಅನೇಕ ರಾಜ್ಯಗಳ ಚರಿತ್ರೆಗಳನ್ನು ಹೇಳಿದರು. ರಾಜರುಗಳನೇಕರ ಜೀವನ ಚರಿತ್ರೆಗಳನ್ನು, ತಿಳಿಸಿದರು. ಋಷಿಗಳನ್ನು ಆಶ್ರಮ ಗಳನ್ನು ಪರಿಚಯಮಾಡಿಸಿದರು. ಅನೇಕ ಮಹಾಮಂತ್ರಗಳನ್ನು ಬೋಧಿಸಿದರು. ಮುಖ್ಯ ಬಾಣಗಳನ್ನು ಬಿಡುವುದನ್ನು ಹೇಳಿ ಕೊಟ್ಟರು. ಮಾರೀಚ ಸುಬಾಹುಗಳೆಂಬುವರನ್ನು ರಾಮ ಲಕ್ಷ್ಮಣರಿಂದ ಶಿಕ್ಷೆಮಾಡಿಸಿ ಅವರಿಬ್ಬರಿಗೆ ಯಾಗ ಸಂರಕ್ಷಣ

ರೆಂಬ ಕೀರ್ತಿ ಬರುವಂತೆಮಾಡಿದರು. ಹೀಗೆ ಅವರಿಬ್ಬರಿಗೂ ಚಿಕ್ಕವಯಸ್ಸಿನಲ್ಲಿಯೇ ಪ್ರಪಂಚಾನುಭವವನ್ನು ಮಾಡಿಸಿ ರಾಜ್ಯವಾಳುವುದಕ್ಕೆ ಯೋಗ್ಯರನ್ನಾಗಿ ಸಿದ್ಧಮಾಡಿದರು.

ವಿಶ್ವಾಮಿತ್ರರ ದಯೆಯಿಂದ ಶ್ರೀರಾಮಚಂದ್ರನಿಗೆ ದೇಶದಲ್ಲೆಲ್ಲ ಮಹಾಬಲಶಾಲಿಯೆಂದು ತನ್ನ ಶಕ್ತಿಯನ್ನು ತೋರಿಸುವ ಅವಕಾಶವುಂಟಾಯಿತು. ಹೇಳಿಕೊಟ್ಟುದೆಲ್ಲ ಆದಮೇಲೆ ಅವರು ರಾಮ ಲಕ್ಷ್ಮಣರನ್ನು ಮಿಥಿಲೆಗೆ ಕರೆದುಕೊಂಡು ಹೋದರು. ಮಿಥಿಲಾಪುರದ ದೊರೆಯಾದ ಜನಕ ಮಹಾರಾಜನು ತನ್ನಲ್ಲಿದ್ದ ಶಿವಧನಸ್ಸನ್ನು ರಾಜ ಸಭೆಯಲ್ಲಿಟ್ಟು ಅದನ್ನು ಬಗ್ಗಿಸಿದವರಿಗೆ ತನ್ನ ಪ್ರೀತಿಯ ಮಗಳಾದ ಸೀತಾದೇವಿಯನ್ನು ಮದುವೆಮಾಡಿಕೊಡುವುದಾಗಿ ಹೇಳಿದ್ದನು. ವಿಶ್ವಾಮಿತ್ರರು ಶ್ರೀರಾಮಚಂದ್ರನಿಗೆ ಶಿವಧನಸ್ಸನ್ನು ಬಗ್ಗಿಸುವಂತೆ ಹೇಳಿದರು. ಗುರುಗಳ ಅಪ್ಪಣೆಯಂತೆ ಆತನು ನಿಮಿಷ ಮಾತ್ರದಲ್ಲಿ ಆ ಬಿಲ್ಲನ್ನು ಬಗ್ಗಿಸಿ ಸೀತಾದೇವಿಯನ್ನು ಮದುವೆಯಾದನು.

ರಾಜ್ಯವಾಳುವ ದೊರೆಗಳಿಗೆ ಬುದ್ಧಿಕಲಿಸಿದ ಪರಶುರಾಮನು ಶ್ರೀರಾಮಚಂದ್ರನು ಮಿಥಿಲೆಯಲ್ಲಿ ತೋರಿಸಿದ ಪರಾಕ್ರಮದ ವಿಷಯವನ್ನು ಕೇಳಿ 'ಶಿವಧನಸ್ಸನ್ನು ಬಗ್ಗಿಸಿದವನು ಸಾಮಾನ್ಯನಲ್ಲ. ಮಹಾ ಪರಾಕ್ರಮಿಯಾಗಿರಬೇಕು' ಎಂದುಕೊಂಡನು. ಪರಶುರಾಮನಲ್ಲಿ ಶಿವಧನುಸ್ಸಿಗೆ ಸರಿಸಮ ಬಲವುಳ್ಳ ವಿಷ್ಣುಧನುಸ್ಸಿತ್ತು. ಅದನ್ನು ಬಗ್ಗಿಸುವ ವೀರನೆಂದರೆ ಪರಶುರಾಮನೊಬ್ಬನೆ. ಅವನನ್ನು ಬಿಟ್ಟರೆ ಉಳಿದವನು ಶಿವಧನುಸ್ಸನ್ನು ಬಗ್ಗಿಸುವ ಬಲವುಳ್ಳ ಮತ್ತೊಬ್ಬ ಎದೆಗಾರ. ಆದರಿಂದ ಪರಶುರಾಮನು, 'ಶಿವಧನುಸ್ಸನ್ನು ಬಗ್ಗಿಸಿದವನು

ವಿಷ್ಣು ಧನುಸ್ಸನ್ನು ಬಗ್ಗಿಸುವುದರಲ್ಲಿ ಸಂದೇಹವಿಲ್ಲ' ಎಂದು ಕೊಂಡು ತನ್ನಲ್ಲಿದ್ದ ವಿಷ್ಣುಧನುಸ್ಸನ್ನು ತೆಗೆದುಕೊಂಡು ಶ್ರೀ ರಾಮಚಂದ್ರನನ್ನು ಕಾಣಲು ಹೊರಟನು. ಆತನು ಶ್ರೀರಾಮ ಚಂದ್ರನನ್ನು ಎದುರುಗೊಂಡು 'ರಾಮಭದ್ರ, ಶಿವಧನಸ್ಸು ಬಗ್ಗಿಸಿ ಮಹಾ ಬಲಶಾಲಿಯೆಂದು ಹೆಸರು ಸಂಪಾದಿಸಿದೆ. ಈಗ ನನ್ನಲ್ಲಿರುವ ವಿಷ್ಣುಧನುಸ್ಸನ್ನು ಬಗ್ಗಿಸಿ ಮಹಾ ಪರಾಕ್ರಮಿ ಯೆಂದು ಪ್ರಸಿದ್ಧನಾಗು' ಎಂದನು.

ಆತನಿಷ್ಟದಂತೆ ಶ್ರೀರಾಮಚಂದ್ರನು ಆ ಬಿಲ್ಲನ್ನು ಒಂದು ಕ್ಷಣದಲ್ಲಿ ಆಟವಾಡುವ ರೀತಿಯಲ್ಲಿ ಮೇಲೆತ್ತಿ ಹಿಡಿದು ಕಬ್ಬಿನ ಜಲ್ಲೆಯನ್ನು ಬಗ್ಗಿಸುವಂತೆ ಬಗ್ಗಿಸಿದನು. ಪರಶುರಾಮನು 'ಇನ್ನು ನನ್ನ ಕೆಲಸವಾಯಿತು. ಮುಂದೆ ಶ್ರೀರಾಮಾ ವತಾರ' ಎಂದು ನಂಬಿ ಶ್ರೀರಾಮಚಂದ್ರನಿಗೆ ನಮಸ್ಕಾರಮಾಡಿ ದನು.

'ಶ್ರೀರಾಮಚಂದ್ರ, ದೊರೆಗೆ ಪ್ರಜೆ ದೇವರು. ನೀನು ದುರುಳರನ್ನು ದಂಡಿಸಿ ಒಳ್ಳೆಯವರನ್ನು ಕಾಪಾಡಬೇಕು. ನ್ಯಾಯ ಅನ್ಯಾಯಗಳನ್ನು ಸರಿಯಾಗಿ ನೋಡಿಕೊಳ್ಳಬೇಕು. ಪ್ರಜೆಗಳೆಲ್ಲರನ್ನು ಸರಿಸಮವಾಗಿ ಪಾಲಿಸಬೇಕು. ದೊರೆಗೂ ಮಿತಿಯಿದೆಯೆಂದು ತಿಳಿದುಕೊಳ್ಳದೆ ಮನಬಂದಂತೆ ಕುಣಿಯ ಬೇಡ. ಈ ತತ್ವವನ್ನು ರಾಜ್ಯವಾಳುವ ದೊರೆಗಳಿಗೆ ಹೇಳಿ ಕೊಡುವ ಸಲುವಾಗಿ ತಪಸ್ಸುಮಾಡಬೇಕಾಗಿದ್ದ ನಾನು ಗಂಡು ಗೊಡಲಿ ಹಿಡಿಯಬೇಕಾಯಿತು. ಇದೋ 'ಈಪೊತ್ತಿಂದ ನನ್ನ ಕೆಲಸವನ್ನು ನಿನಗೆ ಒಪ್ಪಿಸಿದ್ದೇನೆ' ಎಂದು ಹೇಳಿ ಹಿಂದಿರು ಗಿದನು.

ಕೈಕೇಯಿಯ ಸಣ್ಣತನ

ಶ್ರೀ ಸೀತಾರಾಮರ ವಿವಾಹ ವೈಭವವನ್ನು ಕೇಳಿ ಮಾತ್ರ ಸಂತೋಷಪಟ್ಟಿದ್ದ ಅಯೋಧ್ಯಾನಗರದ ಪ್ರಜೆಗಳು ಶ್ರೀರಾಮಚಂದ್ರನಿಗೆ ಯುವರಾಜಪಟ್ಟವನ್ನು ಕಟ್ಟುವರೆಂದು ಕೇಳಿ ಆನಂದ ಹೊಂದಿದರು. ಈ ಮಹೋತ್ಸವವನ್ನು ಕಣ್ಣಾರೆ ನೋಡುವ ಭಾಗ್ಯ ತಮ್ಮದಾಯಿತಲ್ಲ ಎಂದು ಅವರು ನಲಿದಾಡಿದರು. ದೊಡ್ಡಮಗನಾದ ಶ್ರೀರಾಮಚಂದ್ರನಿಗೆ ಪಟ್ಟಕಟ್ಟಿ ಉಳಿದ ಜೀವಿತವನ್ನು ಋಷಿಗಳಂತೆ ಕಾಡಿನಲ್ಲಿ ಕಳೆಯಬೇಕೆಂದು ದಶರಥ ಚಕ್ರವರ್ತಿಯು ಯೋಚಿಸಿದನು. ಗುರು ವಸಿಷ್ಠರು ಪಟ್ಟಾಭಿಷೇಕಕ್ಕೆ ಒಳ್ಳೆಯ ದಿವಸವನ್ನೂ ಗೊತ್ತು ಮಾಡಿದರು. ಜನವೆಲ್ಲ ಒಳ್ಳೆ ಬಟ್ಟೆಬರೆಗಳಿಂದ ನಲಿದಾಡತೊಡಗಿದರು. ಅಯೋಧ್ಯಾನಗರವು ಅಲಂಕಾರಗಳಿಂದ ಕೂಡಿ ಹಬ್ಬದ ಕಳೆಯಿಂದ ಮೆರೆಯತೊಡಗಿತು. ನಗತೊಡಗಿತು.

ಸೂರ್ಯವಂಶದ ಸಿಂಹಾಸನಕ್ಕೆ ಹಕ್ಕುದಾರನೆಂದು ಶ್ರೀರಾಮಚಂದ್ರನನ್ನು ಪ್ರಜೆಗಳೆಲ್ಲ ಒಪ್ಪಿಕೊಳ್ಳುವ ಮಹಾ ದಿನ ಬರುವುದಕ್ಕೆ ಒಂದೇ ಒಂದು ದಿವಸ ಮಾತ್ರ ಉಳಿಯಿತು. ಆ ದಿವಸ ದೇಶದಲ್ಲೆಲ್ಲ ಮಹಾನುಭಾವರುಗಳೆಂದು ಹೆಸರಾದ ಋಷಿಗಳೆಲ್ಲ ಸೇರಿ ಶ್ರೀರಾಮಚಂದ್ರನಿಗೆ ಯುವರಾಜ ಪಟ್ಟ ಕಟ್ಟುವರೆನ್ನುವುದರೊಳಗಾಗಿ ಲೋಕ ಬೆರಗಾಗುವಂಥ ವಿಚಿತ್ರ ನಡೆಯಿತು. ದಶರಥನ ಪ್ರೀತಿಯರಾಣಿ ಕೈಕೇಯಿಯ ಅಚ್ಚುಮೆಚ್ಚಿನ ದಾಸಿ, ಗೂನುಬೆನ್ನಿನ, ಮಂಥರೆಯು ಶ್ರೀರಾಮಚಂದ್ರನಿಗೆ ಯುವರಾಜಪಟ್ಟವೆಂದು ಕೇಳಿ ಬೆಚ್ಚಿಬಿದ್ದಳು. ತನ್ನ ಒಡತಿ ಕೈಕೇಯಿಯ ಮಗ ಭರತನು ಸಿಂಹಾಸನದಲ್ಲಿ ಕೂತರೆ

ತನ್ನ ದೊಡ್ಡಸ್ಥಿಕೆ ಹೆಚ್ಚುವುದೆಂದು ಯೋಚಿಸಿ ಉತ್ಸವಕ್ಕೆ ಅಡ್ಡಿಯಾದಳು. ಅದರಿಂದ ಶ್ರೀರಾಮಚಂದ್ರನು ಯುವರಾಜ ನಾಗುವುದರ ಬದಲು ಹದಿನಾಲ್ಕು ವರ್ಷಗಳು ಕಾಡಿಗೆ ಹೋಗ ಬೇಕಾಯಿತು.

ಮಂಥರೆ ಕೈಕೇಯಿಯಲ್ಲಿಗೆ ಹೋಗಿ "ನಾಳೆ ಶ್ರೀರಾಮ ಚಂದ್ರನಿಗೆ ಯುವರಾಜ ಪಟ್ಟ ಮಹೋತ್ಸವವು ನಡೆಯು ವುದು" ಎಂದಳು.

ಕೈಕೇಯಿಯು ಸಂತೋಷದಿಂದ 'ಒಳ್ಳೆಯ ಸುದ್ದಿ ತಂದೆ ಮಂಥರೆ. ಇದೋ ಕೊಡುವೆ ಕೊರಳ ಸರವನ್ನು' ಎಂದು ತನ್ನ ಕುತ್ತಿಗೆಯಲ್ಲಿದ್ದ ಸರಕ್ಕೆ ಕೈ ಹಾಕಿದಳು.

ಮಂಥರೆಯು ಆ ಮಾತುಗಳಿಗೆ ಕಿವಿಗೊಡದೆ 'ಭರತ ಕುಮಾರರು ನಾಳೆಯಿಂದ ರಾಮನಿಗೆ ಚಾಮರವಿಕ್ಕಿ ಪರಾಕು ಹೇಳುವರು' ಎಂದು ಕೊಂಕು ನುಡಿದಳು.

'ಹಾಗೆಂದರೇನು ಮಂಥರೆ? ಶ್ರೀರಾಮಕುಮಾರನಿಗೆ ಯುವರಾಜ ಪಟ್ಟವನ್ನು ಕಟ್ಟುವುದು ಸರಿಯಾಗಿಯೇ ಇದೆ. ಭರತಕುಮಾರನಂತೂ ಶ್ರೀರಾಮಚಂದ್ರನಿಗೆ ಪ್ರೀತಿಯ ತಮ್ಮ ನಾಗಿಯೇ ಇರುವನು' ಎಂದು ಕೈಕಾಯಿ ಹುಬ್ಬುಗಂಟಿಟ್ಟು ಹೇಳಿದಳು.

ಮಂಥರೆಯು ಹೆದರದೆ ಶ್ರೀರಾಮ ಭರತರು ಪ್ರೀತಿ ಯಿಂದಿದ್ದರೇನಾಯಿತು? ದಶರಥ ಚಕ್ರವರ್ತಿಗಳ ಪ್ರೀತಿಯ ರಾಣಿ ತಾವು ಯುವರಾಜರ ತಾಯಂತೂ ಆಗಲಾರಿರಿ. ಅಷ್ಟೇ ಅಲ್ಲ, ಕೌಸಲ್ಯಾದೇವಿಯರು ಏಳೆಂದರೆ ಏಳು ಕೂಡೆಂದರೆ

ಕೂಡು ಗತಿಗಿಳಿಯುವುದಕ್ಕೆ ತಮಗೆ ನಾಳೆಯಿಂದ ಪಾಠ ಮೊದಲಾಗುವುದು' ಎಂದು ಕೈಕೇಯಿಯ ಬುದ್ಧಿ ಕೆಡಿಸಿದಳು.

ಮಂಥರೆಯ ಮಾತುಗಳು ಕೈಕೇಯಿಗೆ ತಿಳಿಯಿತು. ಕೌಸಲ್ಯಾದೇವಿಯು ಯುವರಾಜನ ತಾಯಿಯೆಂಬ ಅಹಂಕಾರದಿಂದ ತನ್ನನ್ನು ಕಡಮೆಯಾಗಿ ನೋಡುವಳು ಎಂದು ತಪ್ಪಾಗಿ ತಿಳಿದುಕೊಂಡಳು.

'ನೀನೆಷ್ಟು ಜಾಣೆ ಮಂಥರೆ! ನಿನ್ನ ಜಾಣತನ ಯಾರಾರಿಗೂ ಇಲ್ಲ. ನಾಳೆಯ ಉತ್ಸವವನ್ನು ಹೇಗಾದರೂ ಮಾಡಿ ತಪ್ಪಿಸು! ನಿನಗೀಗಲೆ ಕೊರಳ ಹಾರವನ್ನು ಮೆಚ್ಚಾಗಿ ಕೊಡುವೆನು. ನಾಳೆಯ ಉತ್ಸವವನ್ನು ತಪ್ಪಿಸಲು ಉಪಾಯ ಯೋಚಿಸು' ಎಂದು ಅಂಗಲಾಚಿದಳು.

ಮಂಥರೆಯು ಹಿಗ್ಗಿನಿಂದ 'ಶ್ರೀರಾಮಚಂದ್ರನಿಗೆ ಹದಿನಾಲ್ಕುವರ್ಷ ವನವಾಸ, ಭರತಕುಮಾರರಿಗೆ ಯುವರಾಜ ಪಟ್ಟಾಭಿಷೇಕ ಎಂದು ಚಕ್ರವರ್ತಿಯನ್ನು ಬಲವಂತ ಪಡಿಸಿ, ದೇವಿ' ಎಂದು ಕುಯುಕ್ತಿ ಹೇಳಿದಳು.

ಕೈಕೇಯಿಯು 'ಹೀಗೆ ಕೇಳುವುದಕ್ಕೆ ಕಾರಣಬೇಡವೆ?' ಎಂದು ಚಿಂತೆಯಿಂದ ಮುಖವನ್ನು ಭೂಮಿಗೆ ತಗ್ಗಿಸಿದಳು.

ಮಂಥರೆಯು 'ದೇವಿ, ಹಿಂದೆ ಚಕ್ರವರ್ತಿಗಳು ದೇವತೆಗಳ ರಾಕ್ಷಸರ ಯುದ್ಧದ ಸಮಯದಲ್ಲಿ ನಿಮಗೆ ಕೊಟ್ಟ ಎರಡು ವರಗಳನ್ನು ಈಗ ಕೇಳಿ. ತೇರಿನ ಗಾಲಿಗಳು ಮುರಿದುಹೋಗಿ ದೇವತೆಗಳಿಗೆ ಸೋಲಾಗುವ ಸಮಯ ಬಂದಿದ್ದಾಗ ತೇರು ಬೀಳದಂತೆ ಗಾಲಿಗಳಿಗೆ ಕೈಕೊಟ್ಟು ಚಕ್ರವರ್ತಿಗೆ ಜಯ ತಂದ

ವರು ನೀವಲ್ಲವೆ?' ಎಂದು ಕೈಕೇಯಿಯ ಹೃದಯದಲ್ಲಿ ಧೈರ್ಯ ತುಂಬಿದಳು.

ಕೈಕೇಯಿಯು ಮುಖ ಹುಣ್ಣಿಮೆಯ ಚಂದ್ರನಂತೆ ಕಳ ಕಳಿಸಿತು. 'ನನ್ನ ಭಾಗ್ಯದೇವತೆ ನೀನು ಮಂಥರೆ. ನಿನ್ನ ಬೆನ್ನು ಗೂನಾದರೇನು? ನಿನ್ನ ಗುಣ ಬಂಗಾರ. ಆದರಿಂದ ನಿನ್ನ ಬೆನ್ನಿಗೆ ಬಂಗಾರದ ಗೋಪುರ ಮಾಡಿಸಿ ಗೂನು ಮುಚ್ಚು ವೆನು. ಆಳುಗಳಿಗೆಲ್ಲ ನಿನ್ನನ್ನು ಒಡತಿಯನ್ನಾಗಿ ಮಾಡಿ ನಿನ್ನ ಗೌರವ ಹೆಚ್ಚಿಸುವೆನು. ಭರತಕುಮಾರನಿಗೆ ಪಟ್ಟವಾದ ಕೂಡಲೆ ನಿನ್ನನ್ನು ಬಂಗಾರದಲ್ಲಿ ಮುಳುಗಿಸಿಬಿಡುವೆನು, ಎಂದು ಮಂಥರೆ ಯನ್ನು ಪ್ರೀತಿಯಿಂದ ಅಪ್ಪಿದಳು.

ಶ್ರೀರಾಮಚಂದ್ರನ ದೊಡ್ಡತನ

ಕೈಕೇಯಿಯ ಯೋಚನೆ ಮಂಥರೆಯ ಯುಕ್ತಿಯಿಂದ ಸಾಧಿಸಿಯೇ ಸಾಧಿಸಿತು. ಆದರಿಂದ ದಶರಥ ಚಕ್ರವರ್ತಿಯು ಮನಸ್ಸಿಲ್ಲದ ಮನಸ್ಸಿನಿಂದ, ನ್ಯಾಯವಾಗಿ ಸಿಂಹಾಸನದಲ್ಲಿ ಕೂಡಿಸಬೇಕಾದ ಶ್ರೀರಾಮಚಂದ್ರನನ್ನು ಹದಿನಾಲ್ಕು ವರ್ಷ ಗಳು ಕಾಡಿಗೆ ಕಳುಹಿಸಿ ಅವನ ಸ್ಥಳದಲ್ಲಿ ಭರತನನ್ನು ಕೂಡಿ ಸಲು ಒಪ್ಪಿದನು. ಹೀಗೆ ಮಾಡುವುದು ಅನ್ಯಾಯವಾಗಿ ಕಂಡರೂ ದಶರಥ ಚಕ್ರವರ್ತಿಯು ಆಡಿದಂತೆಮಾಡಿ ತೋರಿಸಿ ಸತ್ಯಕ್ಕೆ ಹೆಸರಾದ ಸೂರ್ಯವಂಶದಲ್ಲಿ ಹುಟ್ಟಿದ ತಾನು ಈಗ ಕೊಟ್ಟ ವರಗಳನ್ನು ಇಲ್ಲವೆನ್ನುವುದೆ ಎಂದು ಬಂದ ಕಷ್ಟವನ್ನು ನುಂಗಿಕೊಂಡು ಎರಡು ಕೈಗಳಿಂದಲೂ ಮುಖ ಮುಚ್ಚಿ ಕೊಂಡನು. ಕೈಕೇಯಿಯೇ ಶ್ರೀರಾಮಚಂದ್ರನಿಗೆ ಹೇಳಿಕಳು ಹಿಸಿದಳು.

ಶ್ರೀರಾಮಚಂದ್ರನು ಭರತನಿಗೆ ಯುವರಾಜ ಪಟ್ಟವನ್ನು ಕಟ್ಟುವುದನ್ನು ಸಂತೋಷದಿಂದ ಒಪ್ಪಿಕೊಂಡನು. ತಾನು ಹದಿನಾಲ್ಕು ವರ್ಷ ಕಾಡಿಗೆ ಹೋಗುವುದಕ್ಕಂತೂ ನಗುನಗುತ್ತ ಸಮ್ಮತಿಸಿದನು. 'ಯಾರು ರಾಜ್ಯವಾಳಿದರೇನು? ನಾನೇನು ಭರತನೇನು? ಇಬ್ಬರೂ ಸೂರ್ಯವಂಶದವರು ತಾನೆ. ಪ್ರಜೆಗಳನ್ನು ಮಕ್ಕಳಂತೆ ನೋಡಿಕೊಂಡರೆ ತೀರಿತು. ಭರತನೇ ಯುವರಾಜನಾಗಿರಲಿ' ಎಂದು ಶ್ರೀರಾಮಚಂದ್ರನು ತನ್ನ ದೊಡ್ಡತನವನ್ನು ತೋರಿಸಿದನು.

ಶ್ರೀರಾಮಚಂದ್ರನು ಮಾಡಿದ ತ್ಯಾಗ ಬಹಳ ದೊಡ್ಡದು. ಮೈಕೈ ನೋಯಿಸಿಕೊಳ್ಳದೆ ಸುಖವಾಗಿ ಅರಮನೆಯಲ್ಲಿರುವುದನ್ನು ಬಿಟ್ಟು ಕಾಡಿಗೆ ಹೋಗುವೆನೆಂದು ಯಾರು ಒಪ್ಪಿಕೊಳ್ಳುವರು? ಆ ಕಾಲದಲ್ಲಿ ಸಿಂಹಾಸನಕ್ಕೆ ಹಕ್ಕುದಾರನೆಂದರೆ ಹಿರಿಯಮಗ. ಶ್ರೀರಾಮಚಂದ್ರ ದಶರಥನಿಗೆ ದೊಡ್ಡಮಗ. ಅದರಿಂದ ಆತನಿಗೆ ಆಗ ಬೇಕಾಗಿದ್ದ ಯುವರಾಜ ಪಟ್ಟ ನ್ಯಾಯವಾಗಿಯೇ ಇತ್ತು? ಆತನಿಗೆ ರಾಜ್ಯವಾಳಬೇಕೆಂಬ ಆಸೆ ಇದ್ದಿದ್ದರೆ ಯಾರು ಏನು ಮಾಡಿದರೂ ನಡೆಯುತ್ತಿರಲಿಲ್ಲ. ಪ್ರಜೆಗಳೆಲ್ಲ ಶ್ರೀರಾಮಚಂದ್ರನಿಗೆ ಬೆಂಬಲವಾಗಿ ನಿಲ್ಲುತ್ತಿದ್ದರು. ಆದರೆ ಶ್ರೀರಾಮಚಂದ್ರನೇ ಒಪ್ಪಲಿಲ್ಲ. ಆತನಿಗೆ ದಶರಥನಲ್ಲಿ ಬಹಳ ಭಕ್ತಿಯಿತ್ತು. ಕೈಕೇಯಿಯಲ್ಲಿ ಬಹಳ ಪ್ರೀತಿಯಿತ್ತು. ಭರತನಲ್ಲಿ ಪ್ರಾಣಕ್ಕೆ ಪ್ರಾಣ ಕೊಡುವಷ್ಟು ಪ್ರೇಮವಿತ್ತು. ಅದರಿಂದ ಶ್ರೀರಾಮಚಂದ್ರನು ಭರತನೆ ರಾಜ್ಯವಾಳಲಿ ಎಂದು ಸಂತೋಷದಿಂದ ಕಾಡಿಗೆ ಹೋಗಲು ಸಿದ್ಧನಾದನು.

ಆದರೆ ಲಕ್ಷ್ಮಣನಿಗೆ ಶ್ರೀರಾಮಚಂದ್ರನು ಮಾಡಿದ ಕೆಲಸ ಮನಸ್ಸಿಗೆ ಹಿಡಿಸಲಿಲ್ಲ. 'ಹದಿನಾಲ್ಕು ವರ್ಷ ಕಾಡಿಗೆ

ಹಿರಿಯಣ್ಣನನ್ನು ಕಳುಹಿಸಿ ಭರತನನ್ನು ಸಿಂಹಾಸನದಲ್ಲಿ ಕೂಡಿಸ ಬೇಕೆಂದು ಕೈಕೇಯಿತಾಯಿ ಬಲವಂತಪಡಿಸಿದ ಮಾತ್ರಕ್ಕೆ ತಂದೆ ಒಪ್ಪಬಹುದೆ?' ಎಂದು ಕೆರಳಿದನು. ತಂದೆತಾಯಿ ಹಾಗೆಂದ ಮಾತ್ರಕ್ಕೆ ಶ್ರೀರಾಮಚಂದ್ರನು ಕಾಡಿಗೆ ಹೋಗುವೆ ನೆಂದು ಒಪ್ಪಿಕೊಳ್ಳಬಹುದೆ' ಎಂದು ಅತನು ಗೊಣಗುಟ್ಟಿದನು. 'ಹಿರಿಯ ಮಗನಿಗೆ ಪಟ್ಟಕಟ್ಟುವುದು ಬಹಳ ಕಾಲದಿಂದ ನಡೆದು ಬಂದ ನಡವಳಿಕೆ. ಅದೇ ನ್ಯಾಯವಾದ ನಡವಳಿಕೆ. ನ್ಯಾಯವನ್ನು ಎತ್ತಿ ಹಿಡಿಯಬೇಕಾದ ಚಕ್ರವರ್ತಿ ಅಣ್ಣನಿಗೆ ಪಟ್ಟಕಟ್ಟುವುದನ್ನು. ಬಿಟ್ಟು ಹೇಗೆ ಭರತನಿಗೆ ಪಟ್ಟಕಟ್ಟುವನು?' ಎಂದು ಹುಬ್ಬುಗಂಟಿಟ್ಟನು. 'ಅಣ್ಣಾ, ನೀನು ಸಿಂಹಾಸನವನ್ನು ಬಿಟ್ಟುಕೊಟ್ಟು ಕಾಡಿಗೆ ಹೋಗಬಾರದು. ಹಿರಿಯಣ್ಣನ ಹಕ್ಕು ಪಟ್ಟಕಟ್ಟಿಕೊಂಡು ರಾಜ್ಯವಾಳುವುದು' ಎಂದನು.

ಶ್ರೀರಾಮಚಂದ್ರನು ನಗುನಗುತ್ತ 'ಮಗು ಲಕ್ಷ್ಮಣ, ನೀನು ಹೇಳುವುದು ಸರಿಯೇ. ಆದರೆ ನೋಡು ನಿನ್ನ ಮಾತು ಗಳನ್ನು ಕೇಳಿದರೆ ತಂದೆ ತಾಯಿಗಳ ಮಾತಿಗೆ ಬೆಲೆಯೇನು ಕೊಟ್ಟಹಾಗಾಯಿತು.' ಎಂದನು.

'ತಂದೆಯವರಿಗೆ ವಯಸ್ಸಿನಿಂದ ಬುದ್ಧಿ ಕೆಟ್ಟಿದೆ. ಕೈಕೇಯಿ ತಾಯಿ ರಾಜ್ಯಭಾರ ವಿಷಯದಲ್ಲಿ ಬಾಯಿಹಾಕಿ ಭರತಣ್ಣ ನಿಗೆ ರಾಜ್ಯಕೇಳುವುದರಲ್ಲಿ ಅರ್ಥವಿಲ್ಲ. ಅದರಿಂದ ನೀನು ರಾಜ್ಯ ಬಿಡುವುದು ಸರಿಯಲ್ಲ' ಎಂದು ಲಕ್ಷ್ಮಣ ಹೇಳಿದನು.

'ಲಕ್ಷ್ಮಣ ಹಾಗೆ ನೀನು ಹೇಳಬಾರದು. ಆಡಿದಂತೆ ನಡೆದುಕೊಳ್ಳಬೇಡವೇ ನಮ್ಮ ತಂದೆ? ಅವರ ಮಾತಿಗೆ ನಾನೇ ಬೆಲೆ ಕೊಡದಿದ್ದರೆ, ನಮ್ಮನ್ನು ನೋಡಿ ನಮ್ಮಂತೆ ನಡೆಯುವ ಪ್ರಜೆಗಳು ಏನೆಂದುಕೊಳ್ಳುವರು. ನಾವೆ ಅವರಿಗೆ ತಪ್ಪುದಾರಿ

ತೋರಿಸಿದಂತಾಗುವುದಿಲ್ಲವೆ?' ಎಂದನು, ಶ್ರೀರಾಮಚಂದ್ರ.

ಲಕ್ಷ್ಮಣನು 'ಅಣ್ಣಾ ಹಾಗಿದ್ದರೆ ಪ್ರಜೆಗಳನ್ನು ಕೇಳಿ ಕೆಲಸಮಾಡು. ಪ್ರಜೆಗಳು ಹೇಳದೆ ನೀನು ರಾಜ್ಯ ಬಿಡಬಾರದು' ಎಂದನು.

ಶ್ರೀರಾಮಚಂದ್ರನು ಲಕ್ಷ್ಮಣನನ್ನು ಕೈಹಿಡಿದು ಹತ್ತಿರಕ್ಕೆ ಕರೆದುಕೊಂಡು ಹೇಳಿದನು 'ಲಕ್ಷ್ಮಣ, ದೇಶದ ಕಡೆಗೆ ನೋಡು. ಪ್ರಜೆಗಳನ್ನು ನೋಡು. ರಾಜ್ಯದ ಆಸೆಗಾಗಿ ನಾನು ನೀನು ಹೇಳಿದಂತೆ ಮಾಡಿದರೆ ಸುಮ್ಮಸುಮ್ಮನೆ ನಾವೇ ದೇಶದ ಒಗ್ಗಟ್ಟನ್ನು ಮುರಿದಂತಾಗುವುದು. ಒಂದು ಪಂಗಡ ಭರತನ ಕಡೆ, ಒಂದು ಪಂಗಡ ನನ್ನ ಕಡೆ ಹೀಗೆ ಪ್ರಜೆಗಳು ಎರಡು ತಂಡವಾಗಿ ಕಚ್ಚಾಡುವರು. ಇಷ್ಟೂ ಏನು ಪ್ರಯೋಜನಕ್ಕಾಗಿ? ಭರತನು ನನಗೆ ತಮ್ಮನಲ್ಲವೆ? ಅವನು ಸಿಂಹಾಸನದಲ್ಲಿ ಕುಳಿತುಕೊಳ್ಳಬಾರದೇ? ನಾವೆಲ್ಲ ಒಂದು ಮನೆಯವರಲ್ಲವೆ? ಒಂದು ಮನೆತನದವರಲ್ಲವೆ? ಸೂರ್ಯವಂಶವು ದೊಡ್ಡದು. ಅದರ ಕೀರ್ತಿ ದೊಡ್ಡದು. ಅದರಿಂದ ಸಂತೋಷದಿಂದ ನಾನು ರಾಜ್ಯ ಬಿಟ್ಟು ಕಾಡಿಗೆ ಹೋಗುವೆನು. ಅಣ್ಣತಮ್ಮಂದಿರು ತಮ್ಮ ತಮ್ಮ ಸುಖಕ್ಕಾಗಿ ಸುಮ್ಮ ಸುಮ್ಮನೆ ಜಗಳವಾಡುವುದರಿಂದ ಬಹಳ ಕೆಟ್ಟದು. ಅದರಿಂದ ಯಾರಿಗೂ ಪ್ರಯೋಜನವಿಲ್ಲ. ರಾ ಜ್ಯ ವಾ ಳು ವ ನಾವು ಒಬ್ಬರೊಡನೊಬ್ಬರು ಕಿತ್ತಾಡುವುದರಿಂದ ಪ್ರಜೆಗಳಿಗೆ ತೊಂದರೆ. ದೇಶಕ್ಕೆ ಮಹಾಹಾನಿ. ಇದು ಕೂಡದು. ಈ ದಿವಸ ನಾನು ರಾಜ್ಯಕ್ಕೆ ಜೋತುಬಿದ್ದು ಕೂತರೆ ನಾಳೆ 'ಸೂರ್ಯವಂಶದಲ್ಲಿ ಅಣ್ಣತಮ್ಮಂದಿರು ರಾಜ್ಯಕ್ಕೆ ಗುದ್ದಾಡಿ ದೇಶವನ್ನು ಹಾಳುಮಾಡಿದರಂತೆ' ಎನ್ನರೆ ಜನ? ಪ್ರಜಾಕ್ಷೇಮಕ್ಕಾಗಿ, ದೇಶದ ಕ್ಷೇಮಕ್ಕಾಗಿ "ನಾನು ರಾಜ್ಯಬಿಟ್ಟು ಕಾಡಿಗೆ ಹೋಗುವೆನು' ಎಂದನು.

ಲಕ್ಷ್ಮಣನು ಇನ್ನು ಚರ್ಚೆಮಾಡಿ ಪ್ರಯೋಜನವಿಲ್ಲವೆಂದು ಸುಮ್ಮನಾದನು. ಅಣ್ಣನೊಂದಿಗೆ ಹದಿನಾಲ್ಕು ವರ್ಷಗಳು ತಾನೂ ಕಾಡಿಗೆ ಹೋಗಬೇಕೆಂದು ತೀರ್ಮಾನಿಸಿದನು. ಶ್ರೀರಾಮಚಂದ್ರನು ಲಕ್ಷ್ಮಣನನ್ನು ಸಂಗಡ ಕರೆದುಕೊಂಡು ಹೋಗಲು ಒಪ್ಪಿದನು.

ಸೀತಾದೇವಿ ಶ್ರೀರಾಮಚಂದ್ರನು ಕಾಡಿಗೆ ಹೋಗುವನೆಂದು ಕೇಳಿ ತಾನೂ ಆತನೊಂದಿಗೆ ಹೊರಡಲು ನಿರ್ಧರಿಸಿದಳು. ಮಹಾರಾಜನ ಮಗಳಾದ ಆಕೆಯು ಕಾಡಿನ ಕಷ್ಟವನ್ನು ಸಹಿಸಿಕೊಳ್ಳುವಳೆ ಎಂದು ಶ್ರೀರಾಮಚಂದ್ರನು ಯೋಚಿಸಿ 'ದೇವಿ ಕಾಡಿನ ವಾಸ ನಿನಗೆ ಸರಿಹೋಗುವುದಿಲ್ಲ. ಸುಖದಲ್ಲಿ ಬೆಳೆದ ನಿನಗೆ ಅಲ್ಲಿ ಬಹಳ ಕಷ್ಟ' ಎಂದನು.

ಆದರೆ ಸೀತಾದೇವಿಯು 'ನೀವು ನನ್ನನ್ನು ಇಲ್ಲಿ ಬಿಟ್ಟು ಹೋದರೆ ನನ್ನ ಜೀವವನ್ನೆ ಹಿಂಡಿದಂತಾಗುವುದು. ನಿಮ್ಮನ್ನು ಬಿಟ್ಟು ನಾನೊಬ್ಬಳೆ ಇರಲಾರೆ. ಆದರಿಂದ ನನ್ನನ್ನೂ ಸಂಗಡ ಕರೆದುಕೊಂಡು ಹೋಗಿ' ಎಂದು ಬಲವಂತಪಡಿಸಿದಳು. ಶ್ರೀರಾಮಚಂದ್ರನು ಏನೂ ಹೇಳಲು ತೋಚದೆ ಸುಮ್ಮನಾದನು. ಕಡೆಗೆ ಮನಸ್ಸಿಲ್ಲದ ಮನಸ್ಸಿನಿಂದ ಆಕೆಯನ್ನು ಜೊತೆಗೆ ಕರೆದೊಯ್ಯಲು ಸಮ್ಮತಿಸಿದನು.

ಸೀತಾರಾಮಲಕ್ಷ್ಮಣರು ಕಾಡಿಗೆ ಹೋಗುವರೆಂದು ಕೇಳಿ ಅಯೋಧ್ಯಾನಗರವೆಲ್ಲ ಚಿಂತೆಯಲ್ಲಿ ಮುಳುಗಿತು.

ಯುವರಾಜ ಪಟ್ಟಕಟ್ಟಿಕೊಂಡು ಸೀತಾಲಕ್ಷ್ಮಣರೊಡನೆ ತೇರಿನಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗಬೇಕಾಗಿದ್ದ ಶ್ರೀರಾಮಚಂದ್ರನು ಈಗ ಅದೇ ರೀತಿ ಮೆರವಣಿಗೆಯಲ್ಲಿ ಕಾಡಿಗೆ ಹೊರಡಬೇಕಾಯಿತು. ಕಾಡಿಗೆ ಹೋಗುವ ಮೂವರನ್ನು

ಬಿಟ್ಟು ಬರುವ ಸಲುವಾಗಿ ಜನವೆಲ್ಲ ಪರಿಷೆಯಾಗಿ ನೆರೆದರು. ಎದುರಿಗೆ ಕಣ್ಣೀರಿಡುತ್ತ ನಿಂತಿರುವ ಪ್ರಜೆಗಳಿಗೆ ಮೂವರೂ ಕೈಮುಗಿದರು. 'ನಿಮಗೆಲ್ಲ ಸುಖವಾಗಲಿ' ಎಂದರು. ಅದಕ್ಕೆ ಪ್ರತಿಯಾಗಿ ಜನವೆಲ್ಲ 'ಹಾ! ಜನನಾಯಕರಾಮ! ನೀನಿದ್ದಲ್ಲಿ ನಾವೂ ಇರುವೆವು. ಕಾಡನ್ನೇ ಊರುಮಾಡಿಕೊಂಡು ನಿನ್ನ ಆಶ್ರಮದಲ್ಲಿ ಜೀವಿಸುವೆವು. ನಮ್ಮನ್ನೂ ಕರೆದುಕೊಂಡು ಹೋಗು' ಎಂದು ತೇರಿಗೆ ಅಡ್ಡ ಮಲಗಿ ಕಣ್ಣೀರಿನ ಕೋಡಿ ಹರಿಸಿ ಅತ್ತರು. ಶ್ರೀರಾಮಚಂದ್ರನು ಎಲ್ಲರಿಗೂ ಕೈಮುಗಿದು ಕೊಂಡು 'ಪ್ರಜೆಗಳೇ ನನ್ನನ್ನು ಬಿಟ್ಟುಕೊಡಿ. ಭರತನು ನನ್ನ ತಮ್ಮ. ಅದರಿಂದ ನನಗೆತೋರುವ ಪ್ರೀತಿ ವಿಶ್ವಾಸಗಳನ್ನು ಆತ ನಿಗೂ ತೋರಿಸಿ. ಹದಿನಾಲ್ಕು ವರುಷಗಳು ಕಳೆದ ಕ್ಷಣದಲ್ಲಿಯೇ ನಿಮ್ಮನ್ನು ನೋಡಲು ಓಡಿ ಬರುವೆನು. ಈಗ ಸಂತೋಷದಿಂದ ನನ್ನನ್ನು ಕಾಡಿಗೆಕಳುಹಿಸಿಕೊಡಿ' ಎಂದು ಕೇಳಿಕೊಂಡನು.

ಪ್ರಜೆಗಳು ಮನಸ್ಸಿಲ್ಲದ ಮನಸ್ಸಿನಿಂದ ಶ್ರೀರಾಮ ಸೀತಾ ಲಕ್ಷ್ಮಣರನ್ನು ಬಿಟ್ಟುಕೊಟ್ಟರು. ತೇರು ಅರಮನೆಯನ್ನು ಬಿಟ್ಟು ಕಾಡಿಗೆ ನಡೆಯಿತು. ಅಯೋಧ್ಯಾನಗರವನ್ನು ಹಿಂದೆ ಬಿಟ್ಟು ಮಹಾ ಕಾಡನ್ನು ಹೊಕ್ಕಿತು. ಆ ದಿವಸದಿಂದ ಅವರು ವನವಾಸಿಗಳಾದರು. ಪ್ರಜೆಗಳು ಮಹಾ ದುಃಖಿ ಗಳಾದರು.

ತ್ಯಾಗಕ್ಕೆ ಮೊದಲಗುರು

ತ್ಯಾಗಕ್ಕೆ ಮೊದಲಗುರು ಶ್ರೀರಾಮಚಂದ್ರ. ಒಬ್ಬೊಬ್ಬರು ಒಂದೊಂದು ಗುರಿ ಇಟ್ಟುಕೊಂಡು ದೇಶದ ಒಳ್ಳೆಯದಕ್ಕಾಗಿ ತಮ್ಮ ಸುಖವನ್ನು ಬಿಟ್ಟುಕೊಟ್ಟು ಮಹಾತ್ಯಾಗಿಗಳೆಂದು ಹೆಸರು ಪಡೆದಿದ್ದಾರೆ. ಅಂಥವರಲ್ಲಿ ಒಬ್ಬನು ಮಹಾಕರುಣಿ ಬುದ್ಧದೇವ.

ಮೂಕ ಪ್ರಾಣಿಗಳು ಸಹಾ ಕಷ್ಟಪಡುವುದು ಆತನಿಗೆ ಸಹಿಸಲಿಲ್ಲ. ಇನ್ನು ಜನ ಕಷ್ಟಪಡುವುದನ್ನು ಆತನು ನೋಡಿಯಾನೆ? ಅದಕ್ಕಾಗಿ ಆತನು ರಾಜಕುಮಾರನಾಗಿದ್ದರೂ ರಾಜ್ಯಬಿಟ್ಟು ಕಾಡನ್ನು ಸೇರಿದನು. ಹೀಗೆ ಶ್ರೀರಾಮಚಂದ್ರನಿಂದ ಹಿಡಿದು "ಮಹಾತ್ಮಾ ಗಾಂಧಿಯವರಿಗೆ ಮಹಾ ತ್ಯಾಗಮಾಡಿದ ಮಹಾನುಭಾವರು ನಮ್ಮ ದೇಶದಲ್ಲಿ ಬಹಳ. ಅದು ನಮ್ಮ ಪುಣ್ಯ

ಶ್ರೀರಾಮಚಂದ್ರನು ಹುಟ್ಟಿ ಕೋಟಿವರುಷಗಳಾಗಿರಬೇಕು. ಲೆಕ್ಕಕ್ಕೆ ಸಿಗದಷ್ಟು ದಿವಸಗಳು. ಆದರೂ ಜನ ಆತನನ್ನು ಮರೆತಿಲ್ಲ. ಹುಟ್ಟಿದಾಗ ನಮ್ಮ ಹಾಗೆ ಹುಟ್ಟಿದರೂ ಕೆಲವು ವರುಷಗಳು ಕಳೆಯುವುದರೊಳಗಾಗಿ ತನ್ನ ಒಳ್ಳೆಯ ಗುಣಗಳಿಂದ ಎಲ್ಲರನ್ನು ಮೆಚ್ಚಿಸಿದನು. ಆತನ ಜೀವನ ಎಲ್ಲರಿಗೂ ಮಾದರಿಯಾಯಿತು. ಅಂಥ ಗುಣನಿಧಿಯನ್ನು ಆ ಕಾಲದ ಜನ ದೇವರೆಂದು ಕರೆದರು. ಆ ಹೊತ್ತಿನಿಂದ ಈ ಹೊತ್ತಿಗೂ ಶ್ರೀರಾಮಚಂದ್ರನು ನಮಗೆ ದೇವರಾಗಿಯೇ ಉಳಿದಿದ್ದಾನೆ. ಊಟ ಬಿಟ್ಟಾರು ಜನ ನಿದ್ದೆ ಬಿಟ್ಟಾರು ಜನ. ಕಡೆಗೆ ಮನೆಮಠ, ಮಕ್ಕಳು ಮರಿ ಏನು ಬೇಕಾದರೂ ತೊರೆದಾರು. ಶ್ರೀರಾಮಚಂದ್ರನನ್ನು ಮಾತ್ರ ಬಿಡರು. ಅಂಥ ಸುಗುಣಸಾಂದ್ರ ಶ್ರೀರಾಮಚಂದ್ರ. ಅದಕ್ಕೇ ಆತನ ಹೆಸರು ಮನೆಮಾತು ಎಲ್ಲೆಲ್ಲೂ ಎಲ್ಲರ ಬಾಯಲ್ಲೂ

ರಘುಪತಿ ರಾಘವ ರಾಜಾರಾಮ
ಪತೀತ ಪಾವನ ಸೀತಾರಾಮ.

ಬೆಂಗಳೂರು ಸಿಟಿ ಇಂಡಿಯನ್ ಪ್ರೆಸ್ಸಿನಲ್ಲಿ ಸಿ. ರಾಜಗೋಪಾಲಾಚಾರ್ಯರಿಂದ ಮುದ್ರಿಸಲ್ಪಟ್ಟಿದೆ.

ಬಾಳಿಕೆ ಹೆಚ್ಚು !

ಬೆ

ಮಲ್ಲೇಶ್ವರಂ, ಬೆಂಗಳೂರು.